

ಇಂಗುಬಾವಿ ನಿರ್ಮಾಣದ ಮೊದಲ ಹಂತ

ಬರಬಾರದು' ಎಂದು ಸಂಕಲ್ಪಿಸಿದೆ. ಈಗ ಭಾರೀ ಪ್ರಮಾಣದ ಮಳೆಕೊಯ್ಲು ಶುರು ಮಾಡಿದ್ದಾರೆ.

ಎಸ್ಟೇಟ್ ಮ್ಯಾನೇಜರ್ ಶ್ರೀಧರ ನಾಯಕ್ ಈಗ ಮಳೆ ಹಿಡಿಯುತ್ತಿರುವ ಇಲ್ಲಿನ ಕಟ್ಟಡಗಳ ಚಾವಣಿಗಳನ್ನು ಅಳೆದಿದ್ದಾರೆ. ಐದಾರು ಕಟ್ಟಡಗಳು ಸೇರಿ ಒಟ್ಟು 1450 ಚದರ ಮೀಟರ್ ವಿಸ್ತೀರ್ಣ ಇದೆ. ಅಂದರೆ, ವರ್ಷಕ್ಕೆ ಕನಿಷ್ಠ ಐದು ಕೋಟಿ



ಈ ಕಟ್ಟಡದ ಚಾವಣಿ ನೀರೆಲ್ಲಾ ಪಕ್ಕದ ಇಂಗುಬಾವಿ ಸ್ವಾಹ



ಚೇಂಬರ್ ಮೂಲಕ ಕಸಕಡ್ಡಿ ಪ್ರತ್ಯೇಕಿಸಿದ ಮಳೆನೀರು ಇಂಗುಬಾವಿಗೆ

ಲೀಟರ್ ನೀರನ್ನಿವರು ಶೇವಣಿ ಇಡಲಿದ್ದಾರೆ. ಇದು ಹೇಗೆ? ಒಂದು ಮಿಲಿಮೀಟರ್ ಮಳೆಯನ್ನು ಒಂದು ಮೀಟರ್ ಉದ್ದ, ಅಷ್ಟೇ ಅಗಲದ ಪಾತ್ರೆಯಲ್ಲಿ ತುಂಬಿಕೊಂಡರೆ ಒಂದು ಲೀಟರ್ ಆಗುತ್ತದೆ. ಯಾವುದೇ ಪ್ರದೇಶದ ವಾರ್ಷಿಕ ಮಳೆಯನ್ನು ಮಿಲಿಮೀಟರುಗಳಲ್ಲಿ ತಿಳಿದುಕೊಳ್ಳಿ. ಅಲ್ಲಿನ ಪ್ರತಿ ಚದರಮೀಟರ್ ಜಾಗದ ಮೇಲೆ ವರ್ಷಕ್ಕೆ ಬೀಳುವ ಮಳೆಯ ಲೆಕ್ಕಾಚಾರ ಹಾಕಬಹುದು.

ಉಡುಪಿಯ ವಾರ್ಷಿಕ ಮಳೆ 3,500 ಮಿ.ಮೀ. ಚಾವಣಿಯ ವಿಸ್ತೀರ್ಣ 1450 ಚ.ಮೀ. ಅಂದರೆ, 3500X1450ರ ಲೆಕ್ಕಾಚಾರದಲ್ಲಿ ಕಾಲೇಜಿನ ಚಾವಣಿಯ ಮೇಲೆ 5,075,000 ಲೀಟರ್ ನೀರು ಸುರಿಯುತ್ತದೆ. ಐದು ಲಕ್ಷ ಎನ್ನಿ. ಇಳೆಗೆ ಇಷ್ಟು ನೀರಿಳಿಸುತ್ತಿರುವ ಈ ಕ್ಯಾಂಪಸ್ ಭವಿಷ್ಯದಲ್ಲಿ ಸದಾ ಬರನಿರೋಧಕ ಆಗಬಹುದು.

ಕಾಲೇಜಿನ ಬೇರೆಬೇರೆ ಬ್ಲಾಕುಗಳು, ಕ್ಯಾಂಟೀನ್, ಲೇಡೀಸ್ ಹಾಸ್ಟೆಲು ಸೇರಿದಂತೆ ದಿನಕ್ಕೆ ಸರಾಸರಿ ಕಾಲು ಲಕ್ಷ ಲೀಟರ್ ಬೇಕು. ಕ್ಯಾಂಪಸ್ಸಿನಲ್ಲಿ ಒಟ್ಟು ನಾಲ್ಕು ತೆರೆದ ಬಾವಿಗಳಿವೆ. ಅದರಲ್ಲಿ ಎರಡು ಬಾವಿಗಳು ಇವರಿಗೆ ಮುಖ್ಯ ನೀರಾಶ್ರಯವಾಗಿದ್ದುವು. ಅವೂ ಈ ಬೇಸಿಗೆಯಲ್ಲಿ ತಳಕ್ಕಿಳಿದು ಒಲ್ಲೆ ಎಂದವು. ಈ ಶಿಕ್ಷಣ ಸಂಸ್ಥೆಯ ಚರಿತ್ರೆಯಲ್ಲೇ ಮೊದಲ ಬಾರಿಗೆ ನೀರಿನ ಟ್ಯಾಂಕರ್ ಕಾಲೇಜಿಗೆ ಬಂತು.

ನೆನೆಯುತ್ತಾರೆ ಶ್ರೀಧರ ನಾಯಕ್, ಬರ ಇದ್ದಾಗ ನೀರಿನ ಟ್ಯಾಂಕರಿನ ಶುಲ್ಕವೂ ದುಪ್ಪಟ್ಟು. 2000 ರೂ. ತೆರಬೇಕು. ಒಂದು ತಿಂಗಳಿಗೂ ಹೆಚ್ಚು ಕಾಲ ನಾವು 20 ಟ್ಯಾಂಕರ್ ತರಿಸಿರಬಹುದು. ಟ್ಯಾಂಕರು ನೀರಿನ ಅವಲಂಬನೆ ಕಾಲೇಜ್ ಆಡಳಿತದಲ್ಲಿ ಆತಂಕ ಹುಟ್ಟಿಸಿತು. ನೀರಿಗಾಗಿ 'ಏನಾದರೂ' ಮಾಡಲೇಬೇಕು ಅನಿಸಿತು.

## ಕೊಳವೆಬಾವಿ ಬೇಡ!

ಕಾಲೇಜಿನ ರವೀಂದ್ರ ಮಂಟಪ ಮತ್ತು ಲೇಡೀಸ್ ಹಾಸ್ಟೇಲಿನ ಬಳಿಯ ಎರಡು ಬಾವಿ ಇವರಿಗೆ ಭರವಸೆಯ ಮೂಲಗಳು. ಮೊದಲು ರವೀಂದ್ರ ಮಂಟಪದ ಬಳಿಯ ಬಾವಿಯ ಕೆಸರು ತೆಗೆಸಿದರು. ಸ್ವಲ್ಪ ಕೆಸರು ಮೇಲೆ ಬಂದ ಮೇಲೆ ಹಾಸುಬಂಡೆ ಸಿಕ್ಕಿತು. 'ಅದನ್ನು ಬ್ಲಾಸ್ಟ್ ಮಾಡಿಸಿ ಆಳ ಮಾಡಿಸಿ' ಎಂಬ ಸಲಹೆ ಬಂತು. ಈ ಬಗ್ಗೆ ತಜ್ಞರನ್ನು ವಿಚಾರಿಸಿದಾಗ 'ಅಲ್ಲಿ ಬ್ಲಾಸ್ಟಿಂಗ್ ಅಪಾಯಕಾರಿ. ಹತ್ತಿರದಲ್ಲಿರುವ ಕಟ್ಟಡಗಳಿಗೆ ಹಾನಿ ಸಂಭಾವ್ಯತೆ ಇದೆ' ಎಂದು ಅವರು ಎಚ್ಚರಿಕೆ ಕೊಟ್ಟರು.

ಇನ್ನೇನು ದಾರಿ? ಈವರೆಗೂ ಇಲ್ಲಿ ಕೊಳವೆಬಾವಿ ಕೊರೆಸಿರಲಿಲ್ಲ. ಕಳೆದ ಬೇಸಿಗೆ ಹುಟ್ಟಿಸಿದ ಆಘಾತದಂತಹ ಸಂದರ್ಭದಲ್ಲಿ ಎಲ್ಲರೂ ಕೊಡುವ ಸಲಹೆ 'ಕೊಳವೆಬಾವಿ ಕೊರೆಸಿ' ಎನ್ನುವುದು. ಇವರಿಗೂ ಅಂಥ ಸಲಹೆ ಸಾಕಷ್ಟು ಬಂತು. ಆದರೆ ಪ್ರಾಂಶುಪಾಲರು ಹಿಂದೆಮುಂದೆ ನೋಡದೆ ಈ ದಾರಿ ಸ್ವೀಕರಿಸಲಿಲ್ಲ. ಪ್ರಾಂಶುಪಾಲರು ಮತ್ತು ಎಸ್ಟೇಟ್ ಮ್ಯಾನೇಜರರು ಈ ವಿಚಾರವನ್ನು ಮತ್ತೆಮತ್ತೆ ಮಂಥನ ಮಾಡಿದರು. 'ಕೊಳವೆಬಾವಿ ತೋಡಿದಾಗ ನೀರು ಸಿಗದಿದ್ದರೆ ಏನು ಮಾಡುವುದು?', 'ಕೊಳವೆಬಾವಿ ಶಾಶ್ವತ ಪರಿಹಾರ ಅಲ್ಲವಲ್ಲ?' – ಈ ಎರಡು ವಾಸ್ತವಿಕತೆಗಳು ಕಾಲಕ್ರಮದಲ್ಲಿ 'ಕೊಳವೆಬಾವಿ ಬೇಡವೇ ಬೇಡ' ಎನ್ನುವ ಅಭಿಪ್ರಾಯಕ್ಕೆ ಪುಷ್ಟಿ ಕೊಟ್ಟವು.

ಹಾಗಾದರೆ ಇನ್ನೇನು? ಎಂಜಿಎಂ ಕಾಲೇಜಿನಲ್ಲಿ ಈ ಹಿಂದೆ ಹಲವು ಮಳೆಕೊಯ್ಲು ಮಾಹಿತಿ ಕಾರ್ಯಕ್ರಮಗಳು ನಡೆದಿದ್ದವು. ಆಗ ವ್ಯಕ್ತಪಡಿಸಿದ ವಿಚಾರಗಳು ಇಲ್ಲಿ ಹಲವರಲ್ಲಿ ನೆನಪಿತ್ತು. ಮಳೆಕೊಯ್ಲು ಮಾಡೋಣ ಎನ್ನುವ ನಿಶ್ಚಯಕ್ಕೆ ಬಂದರು. ಡಾ. ಎಂ.ಜಿ. ವಿಜಯ್, ಡಾ. ಹೆಚ್. ಎನ್. ಉದಯಶಂಕರ್ ಅವರ ಸಲಹೆ ಕೇಳಿದರು. ಉದಯಶಂಕರ್ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಭೂಗರ್ಭಶಾಸ್ತ್ರ ಪ್ರೊಫೆಸರ್. ಅವರು ಎಂಜಿಎಂ ಕಾಲೇಜಿಗೆ ಭೇಟಿ ಕೊಟ್ಟು ಸ್ಥಳ ಅಧ್ಯಯನ ನಡೆಸಿದರು.

## ನೀರು ತುಂಬುವ ಬಾವಿ!

ಆ ಇಡೀ ಪ್ರದೇಶದಲ್ಲಿ 40–45 ಅಡಿ ಆಳದಲ್ಲಿ ಶಿಲಾವಲಯ ಇದೆ. ಅವು ಬಿರುಕೇ